ಬೇಕೆಂಬುದು ಮುಖ್ಯ. ಅವು ಹೆಚ್ಚು ಪ್ರಾಮುಖ್ಯವಾದಂಥ ರಸ್ತೆಗಳಾಗಿರಬೇಕು. ಜನಗಳ ಓಡಾಟ ಬಸ್ಸುಗಳ ಓಡಾಟ ಆ ರಸ್ತೆಗಳಲ್ಲಿ ಹೇಗಿದೆ ಎಂಬುದನ್ನು ನೋಡಬೇಕಾಗುತ್ತದೆ. ದವಸ ಧಾನ್ಯಗಳ ಮಾರಾಟಕ್ಕೆ ಅನುಕೂಲವಾಗಿದೆಯೇ ಎಂಬುದನ್ನೂ ಸಹ ನೋಡಬೇಕಾಗುತ್ತದೆ. ಅಲ್ಲದೆ ಅನೇಕ ಹಳ್ಳಿಗಳು ನಂಜಿನುವ ಸ್ಥಳದಲ್ಲಿ ಆ ರಸ್ತೆ ಇದೆಯೇ ಎಂಬುದನ್ನೂ ಸಹ ಗಮನಿಸ ಬೇಕಾಗುತ್ತದೆ.

ಶ್ರೀ ಕೋಣಂದೂರು ಲಿಂಗಪ್ಪ.—ತಾವೇ ಹಿಂದೆ ಒಂದು ಸಾರಿ ಹೇಳಿದಿರಿ, ಭೂಮಿ ಹುಟ್ಟಿದ ರಾಗಾಯಿತು ಇದ್ದಂಥ ಕೆಲವು ರಸ್ತೆಗಳು, ಸೇತುವೆಗಳು ನಿರ್ಮಾಣವಾಗದೆ ಹಾಗೆಯೇ ಇವೆಯೆಂದು. ಅಂದಮೇಲೆ ಅವಿನ್ನೂ ತಮ್ಮ ಕೃಪೆಗೆ ಪಾತ್ರವಾಗಲಿಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನನಗೆ ಜ್ಞಾಪಕವಿದ್ದಹಾಗೆ ನನ್ನ ಕಾಲದಲ್ಲಿ ಹಿಂದೆ ಮುಂದೆ ನಾಡಿನಲ್ಲಿ ಅನೇಕ ರಸ್ತೆ ಕಾಮಗಾರಿಗಳನ್ನು ಮಾಡಿಸಿದ್ದಾಗಿದೆ. ಅವು ಈಗಲೂ ಯೋಗ್ಯವಾದುವು ಗಳಾಗಿವೆ. ಅನೇಕ ರಸ್ತೆಗಳನ್ನು ಪಿ.ಡಬ್ಲ್ಯೂ.ಡಿ. ರಸ್ತೆಗಳನ್ನಾಗಿ ಮಾಡಿದ್ದೂ ತಪ್ಪಿಗೆ ಜ್ಞಾಪಕ ವಿರಬಹುದು.

ಶ್ರೀ ಬಿ. ಪುಟ್ಟಸ್ವಾಮಯ್ಯ.—ತಾವು ಹಿಂದೆ ಜಿಲ್ಲಾ ಬೋರ್ಡು ಅಧ್ಯಕ್ಷರಾಗಿದ್ದಾಗ ಆದ ರಸ್ತೆ ಗಳೆಲ್ಲಾ ಈಗ ತ್ರಿಶಂಖು ಸ್ವರ್ಗದಲ್ಲಿರುತ್ತವೆ ಎಂಬುದು ತಮ್ಮ ಜ್ಞಾಪಕಕ್ಕೆ ಬಂದಿದೆಯೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅನೇಕ ರಸ್ತೆಗಳು ದುಸ್ಥಿತಿಯಲ್ಲವೆ ಎಂಬುದು ನಮ್ಮ ಗಮನಕ್ಕೂ ಬಂದಿದೆ. ಅವುಗಳನ್ನೆಲ್ಲಾ ದುರಸ್ತಿ ಮಾಡುವುದಕ್ಕೆ ಕಾರ್ಯಕ್ರಮಗಳನ್ನು ತ್ವರಿತವಾಗಿ ರೂಪಿಸಲಾಗುತ್ತಿದೆ. ಅಂಥ ಕಡೆ ಕೆಲಸಗಳನ್ನೂ ಕೂಡ ಬೇಗ ಕೈಗೊಳ್ಳಲಾಗುತ್ತದೆ.

Misuse of Aid given for Coconut Development.

28. **Sri M. B. RAMASWAMY** (Anekal).—

Will the Minister for Agriculture and Forests be pleased to state :—

(*a*) the quantum of aid that is given by Government per acre for coconut development ;

(*b*) the number of persons in Anekal taluk who have received benefit under this Scheme ;

(*c*) whether there is any complaint to the effect that one or two persons have knocked out major portion of the amount under the scheme by getting the amount sanctioned in the names of their friends or relatives ?

Sri K. H. PATIL (Minister for Agriculture and Forests).—

(*a*) Government do not give any financial assistance directly for the development of coconut. Financial assistance is, however, given through the Mysore State Co-operative Land Development Bank out of the contributions received from the Agricultural Refinance Corporation and the State Government. A special scheme for the development of coconut is in operation in Anekal Taluka and the following quantum of assistance in the form of loan is admissible under the Scheme in Anekal taluk.—

(1) Rs. 1,400 per acre where 50 plants are planted ;

(SRI K. H. PATIL)

(2) Rs. 1,500 per acre where 55 plants are planted; and

(3) Rs. 1,600 per acre where 60 plants are planted.

(*b*) 42.

(*c*) No.

ಶ್ರೀ ಎಂ. ಬಿ. ರಾಮಸ್ವಾಮಿ.—ಇಲ್ಲಿ (ಎ) ಗೆ ಉತ್ತರವಾಗಿ ಒಂದು ಎಕರೆಯಲ್ಲಿ 70 ತೆಂಗಿನ ಗಿಡಗಳನ್ನು ಬೆಳೆಸಿದವರಿಗೆ 1,400 ರೂಪಾಯಿಗಳ ಸಾಲವನ್ನೂ ಮತ್ತು ಅದೇ ಒಂದು ಎಕರೆಯಲ್ಲಿ 55 ಗಿಡಗಳನ್ನು ಬೆಳೆದವರಿಗೆ 1,500 ರೂಪಾಯಿಗಳನ್ನೂ ಕೊಡರಾಗುತ್ತದೆಂದು ಹೇಳಿದ್ದಾರೆ. ಈ ವ್ಯತ್ಯಾಸಕ್ಕೆ ಕಾರಣವೇನು ?

†ಶ್ರೀ ಕೆ. ಎಚ್. ಪಾಟೀರ್.—ಕನ್ನಡದ ಪ್ರಶ್ನೋತ್ತರದಲ್ಲಿ ತಪ್ಪಾಗಿ ಅಚ್ಚಾಗಿದೆ, 50 ಮರಗಳು ಎನ್ನುವುದಕ್ಕೆ ತಪ್ಪಾಗಿ 71 ಮರಗಳೆಂದು ಅಚ್ಚಾಗಿದೆ. ಇಂಗ್ಲೀಷ್ ಕಾಪಿಯಲ್ಲಿ ಸರಿಯಾಗಿ ಅಚ್ಚಾಗಿದೆ. 50 ಮರಗಳಿಗೆ 1,400 ರೂಪಾಯಿಗಳೂ; 55 ಮರಗಳಿಗೆ 1,500 ರೂಪಾಯಿಗಳೂ ಮತ್ತು 60 ಮರಗಳಿಗೆ 1600 ರೂಪಾಯಿಗಳೆಂದು ತಿಳಿಸರಾಗಿದೆ.

ಶ್ರೀ ಎಂ. ಬಿ. ರಾಮಸ್ವಾಮಿ.—ಈ ಸಾಲ ಸ್ಥಿತಿವಂತರಿಗೇ ಸಿಕ್ಕುತ್ತಿದ್ದು ಇದರಿಂದ ಬಡವರಿಗೇನೂ ಅನುಕೂಲವಾಗುತ್ತಿಲ್ಲ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಎಚ್. ಪಾಟೀರ್.—ಸರ್ಕಾರದವರು ನೇರವಾಗಿ ಆ ಸಾಲಗಳನ್ನು ಕೊಡುತ್ತಿಲ್ಲ. ಅದನ್ನು ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನ ಮೂಲಕ ಕೊಡರಾಗುತ್ತಿದೆ. ಹಾಗೆ ಎಲ್ಲಿಯಾದರೂ ತಪ್ಪುಗಳಾಗಿದ್ದರೆ ಅದನ್ನು ಸರ್ಕಾರದವರ ನಜರಿಗೆ ತಂದರೆ ತ್ವರಿತವಾಗಿ ಸರಿಪಡಿಸರಾಗುತ್ತದೆ.

ಶ್ರೀ ಎಂ. ಬಿ. ರಾಮಸ್ವಾಮಿ.—ಹಣವನ್ನು ಸಾಲವಾಗಿ ಕೊಡತಕ್ಕ ಬ್ಯಾಂಕಿನಮೇಲೆ ಸರ್ಕಾರದ ಸೂಪರ್‌ವಿಷನ್ ಇದೆಯೇ ?

ಶ್ರೀ ಕೆ.ಎಚ್. ಪಾಟೀರ್.—ತಮ್ಮ ಉಪ ಪ್ರಶ್ನೆ ಈ ಪ್ರಶ್ನೆಗೆ ಸಂಬಂಧವಿಲ್ಲದ್ದಾದರೂ ಇದಕ್ಕೆ ಉತ್ತರ ಕೊಡುತ್ತೇನೆ. ಸೂಪರ್‌ವಿಷನ್ ಕೆಲಸವನ್ನು ನಮ್ಮ ರಿಜಿಸ್ಟ್ರಾರ್ ಮತ್ತು ಜಾಯಿಂಟ್ ರಿಜಿಸ್ಟ್ರಾರ್ ಅವರೂ ಮತ್ತು ಇನ್ನೂ ಅನೇಕ ಶಿಬ್ಬಂದಿ ವರ್ಗದವರು ನೋಡಿಕೊಳ್ಳುತ್ತಿದ್ದಾರೆ.

Sri D. B. KALMANKAR.—I wish to know whether all the 42 persons who have been benefited by the Scheme have got equal loan or whether some have got more and some less ?

Sri K. H. PATIL.—That information is not available with me.

Sri H. S. SIDDAPPA.—Will the Hon. Minister inform me specifically whether the assistance given by the Land Development Bank is loan or contribution ? ಸ್ಟೇಟ್ ಕೋ-ಆಪರೇಟಿವ್ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ ನವರು ಆಗ್ರಿಕಲ್ಚರರ್ ರೀಫೈನಾನ್ಸ್ ಕಾರ್ಪೊರೇಷನ್ನಿನಿಂದ ಬರತಕ್ಕ ಧನ ಸಹಾಯದಿಂದ ಸಾಲವನ್ನು ಕೊಡುತ್ತಿದ್ದಾರೆಂದು ಹೇಳರಾಯಿತು.

Sri K. H. PATIL.—It will be a loan against the State Government. ಮೊದಲು ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನವರು ಸಾಲವನ್ನು ಕೊಡುತ್ತಾರೆ. ಅದನ್ನು ಮತ್ತೆ ಆಗ್ರಿಕರ್ಚರರ್ ರೀಫೈನಾನ್ಸ್ ಕಾರ್ಪೊರೇಷನ್ನಿನವರಿಂದ ಬರತಕ್ಕ ಸಹಾಯದಿಂದ ರೀಇಂಬರ್ಸ್ ಮಾಡಿಕೊಳ್ಳುತ್ತಾರೆ.

Sri H. S. SIDDAPPA.—My Taluk is covered with this coconut development scheme. It is a coconut area. I would like to know whether Government would formulate a scheme to give loans through this Agricultural Refinance Corporation and the Land Development Bank for replanting coconut plants wherever there are old plants.

There are lakhs of old plants and agriculturists are not taking loan under this scheme for coconut development. Will Government consider this as a suggestion ?

Sri K. H. PATIL.—It is a good suggestion. But Government is already aware of the fact that wherever schemes are forthcoming, we are trying our level best to see that agriculturists get finance. There is a uniform policy now and according to it, all financial assistance ought to be channellised through co-operative agencies. The Land Development Bank is the agency for it and it is financing loan on the basis of the recommendation of the Government officials.

ಶ್ರೀ ಬಿ. ಬೈರಪ್ಪಾಜಿ.—ನಮ್ಮಲ್ಲಿ ಅನೇಕ ಕಡೆ ತೆಂಗಿನ ಬೆಳೆಯನ್ನು ವಿಸ್ತಾರಮಾಡುವುದಕ್ಕೆ ಇನ್ನೂ ಅವಕಾಶ ಬೇಕಾದಷ್ಟಿದೆ. ಇದನ್ನು ವಿಸ್ತಾರ ಮಾಡುವುದೂ ಕೂಡ ಬಹಳ ಅಗತ್ಯವಾದುದು. ಹಾಲಿ ಸರ್ಕಾರದವರೇನು ಹಣವನ್ನು ಸಾಲದ ರೂಪದಲ್ಲಿ ರೈತರಿಗೆ ಒದಗುವಂತೆ ಒಂದು ವ್ಯವಸ್ಥೆ ಮಾಡಿದ್ದಾರೆ, ಅದರಲ್ಲಿ ಶೇಕಡ 25ರಷ್ಟನ್ನಾದರೂ ಸಬ್‌ಸಿಡಿಯಾಗಿ ಪರಿವರ್ತಿಸುವುದಕ್ಕೆ ಆಗುವುದಿಲ್ಲವೇ ?

ಶ್ರೀ ಕೆ. ಎಚ್. ಪಾಟೀಲ್.—ಎಲ್ಲಿ ಇದರ ವ್ಯವಸಾಯದ ಖರ್ಚು ಹೆಚ್ಚಾಗಿದ್ದು ಇದರಿಂದ ಬರತಕ್ಕ ಉತ್ಪತ್ತಿ ಕಡಮೆ ಆಗಿದೆಯೋ ಅಂಥ ಕಡೆ ತಮ್ಮ ಸಲಹೆಯನ್ನು ಪರಿಶೀಲಿಸಬಹುದು. ಆದರೆ ಸಧ್ಯದ ಪರಿಸ್ಥಿತಿಯಲ್ಲಿ ಈ ಬೆಳೆಯಿಂದ ರೈತರಿಗೆ ಅಧಿಕ ಉತ್ಪತ್ತಿ ಬರುತ್ತಿರುವುದರಿಂದ ಮುತ್ತು ಹಾಲಿ ಕೊಡತಕ್ಕ ಸಾಲಕ್ಕೆ ಶೇಕಡ ಎಂಟೂವರೆ ಪರ್ಸೆಂಟ್ ಬಡ್ಡಿಯನ್ನು ಹಾಕುತ್ತಿರುವದರಿಂದ ಆ ಸಬ್‌ಸಿಡಿಯನ್ನು ಕೊಡುವುದಕ್ಕಾಗುವುದಿಲ್ಲ.

ಒಬ್ಬ ಮಾನ್ಯ ಸದಸ್ಯರು.—ನಾನೂ ಕೂಡ ಆ ತಿಪಟೂರು ಪ್ರದೇಶದಿಂದಲೇ ಬರುತ್ತಿದ್ದೇನೆ. ಆದರೆ ಅಲ್ಲಿ ಯಾರು ಈಗಾಗಲೆ ಆ ಭೂ ಅಭಿವೃದ್ಧಿ ಬ್ಯಾಂಕಿಗೆ ಡಿಫಾಲ್ಟರಾಗಿದ್ದಾರೆ ಅಂಥವರಿಗೆ ಆ ಬ್ಯಾಂಕಿನವರು ಹಣವನ್ನು ಸಾಲದ ರೂಪದಲ್ಲಿ ಕೊಡುವುದಕ್ಕೆ ಒಪ್ಪುತ್ತಿಲ್ಲ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಎಚ್. ಪಾಟೀಲ್.—ಹಾಗೆ ರೈತರಿಗೆ ಯೋಗ್ಯ ಕಾಲಕ್ಕೆ ಹಣ ಮುಟ್ಟಲಿಲ್ಲ ಎಂಬ ಸಂದರ್ಭಗಳಿದ್ದರೆ ಸರ್ಕಾರದವರ ಜನರಿಗೆ ತಂದರೆ ಅದಕ್ಕೆ ಸೂಕ್ತ ಕ್ರಮ ಕೈಗೊಳ್ಳಲಾಗುತ್ತದೆ.

ಶ್ರೀ ಎಚ್. ಎಸ್. ಸಿದ್ಧಪ್ಪ.—ಈ ರಿಫೈನಾನ್ಸ್ ಸ್ಕೀಂ ಕೆಳಗಡೆ ಏನು ಹಣ ಕೊಡುತ್ತಾರೋ ಅದರಲ್ಲಿ ರೂರಲ್ ಡಿಬೆಂಚರ್ ಎಂದು 5 ಪರ್ಸೆಂಟ್ ಹಣವನ್ನು ಹಿಡಿಯುತ್ತಿದ್ದಾರೆ. ಅದನ್ನು ತಪ್ಪಿಸುವುದಕ್ಕೆ ಸಾಧ್ಯವಿಲ್ಲವೆ ?

Sri K. H. PATIL.—It will be noted for future guidance.

ಶ್ರೀ ಬಿ. ಬೈರಪ್ಪಾಜಿ.—ಉತ್ಪತ್ತಿ ಕಡಮೆ ಇರತಕ್ಕ ಪ್ರದೇಶದಲ್ಲಿ ಸಬ್‌ಸಿಡಿ ಕೊಡಬಹುದೆಂದು ಆಗಲೇ ಅಪ್ಪಣೆ ಕೊಡಿಸೋಣವಾಯಿತು. ಆದರೆ ಈ ತೆಂಗಿನ ಬೆಳೆಯನ್ನು ಇನ್ನೂ ಅಧಿಕವಾಗಿ ಬೆಳೆಸುವುದಕ್ಕೆ ಅವಕಾಶವಿದೆ. ಆದ್ದರಿಂದ ರೈತರಿಗೆ ಪ್ರೋತ್ಸಾಹ ಕೊಡಲು ಶೇಕಡ 25 ರಷ್ಟು ಸಾಲವನ್ನು ಸಬ್‌ಸಿಡಿಯಾಗಿ ಪರಿವರ್ತಿಸುವುದಕ್ಕಾಗುವುದಿಲ್ಲವೇ ?

ಶ್ರೀ ಕೆ. ಎಚ್. ಪಾಟೀಲ್.—ಸಧ್ಯದ ಪರಿಸ್ಥಿತಿಯಲ್ಲಿ ಸಾಲವನ್ನು ಸಬ್‌ಸಿಡಿಯಾಗಿ ಪರಿವರ್ತಿಸಲು ಸಾಧ್ಯವಿಲ್ಲ.

ಶ್ರೀ ಎಂ. ಬಿ. ರಾಮಸ್ವಾಮಿ.—ಈ ಸ್ಕೀಮಿನಲ್ಲಿ ಹರಿಜನ ಗಿರಿಜನರಿಗೇನಾದರೂ ಸಹಾಯ ಮಾಡತಕ್ಕ ಸಂದರ್ಭವಿದೆಯೇ ?

ಶ್ರೀ ಕೆ. ಎಚ್. ಪಾಟೀಲ್.—ಅವರಿಗೆ ಮೊದಲು ಬಿತ್ತನೆ ಬೀಜ ಕೊಡಿಸಲು ಏರ್ಪಾಡು ಮಾಡಬಹುದು.

ಶ್ರೀ ಬಿ. ರಾಮಸ್ವಾಮಿ.—ಈಗ ಒದಗಿಸಿರುವ ಸಸಿಗಳಲ್ಲಿ ಬಹುಭಾಗ ಹಾಳಾಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಎಚ್. ಪಾಟೀಲ್.—ನನ್ನ ನಜರಿಗೆ ಬಂದಿಲ್ಲ. ಸರಬರಾಯಿ ಮಾಡಿರುವುದು ಬಹಳ ಉತ್ತಮ ರೀತಿಯಿಂದ ಬೆಳೆದಿವೆ ಎಂದು ಹಾರ್ಟಿಕಲ್ಚರಲ್ ಇಲಾಖೆಯಿಂದ ವರದಿಯಾಗಿದೆ.